**3**

# ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿಯಮಿತ

ನಂ.132. ಕೆಂಗಲ್ ಹನುಮಂತಯ್ಯ ರಸ್ತೆ, ಬೆಂಗಳೂರು – 560 027

---

## ಪತ್ತಿನ ಸಹಕಾರಿಗಳಿಗಾಗಿ ಆರ್ಥಿಕ ಸಬಲತೆಯ ಮಾನದಂಡಗಳು

**ಕಾಯ್ದೆ ಕಲಂ 53 (7) (ಎಚ್) (ಅಡಿ)**

## ಪ್ರಸ್ತಾವನೆ

ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ಸಹಕಾರಿಗಳನ್ನು ಜವಾಬ್ದಾರಿಯುತ, ಸ್ಪರ್ಧಾತ್ಮಕ, ಸ್ವಾವಲಂಬಿ ಆರ್ಥಿಕ ಉದ್ಯಮಗಳೆಂದು ಗುರುತಿಸಲಾಗಿದೆ. ಸದಸ್ಯರೇ ಒಡೆತನ ಹೊಂದಿರುವ, ನಿರ್ವಹಿಸುವ ಮತ್ತು ನಿಯಂತ್ರಿಸುವ ಹಾಗೂ ಸ್ವಸಹಾಯ ಮತ್ತು ಪರಸ್ಪರ ನೆರವಿನ ಮೇಲೆ ಆಧಾರಿತವಾದ ಆರ್ಥಿಕ ಉದ್ಯಮಗಳಾದ ಈ ಸಹಕಾರಿಗಳು ಆರ್ಥಿಕವಾಗಿ ಸಬಲವಾಗಬೇಕಾಗಿರುವುದು ಅವಶ್ಯವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ಕಾಯ್ದೆ ಕಲಂ 53 (7) (ಎಚ್) ಅಡಿ ಈ ಮಾನದಂಡಗಳನ್ನು ರೂಪಿಸುವ ಜವಾಬಾರಿಯನ್ನು ನಿಭಾಯಿಸುತ್ತಾ ಸಂಯುಕ್ತ ಸಹಕಾರಿಯು ಪತ್ತಿನ ಸಹಕಾರಿಗಳಿಗಾಗಿ ಹಾಗೂ ಸ್ವಸಹಾಯ ಸಹಕಾರಿಗಳಿಗಾಗಿ ಈ ಕೆಳಗಿನ ಮಾನದಂಡಗಳನ್ನು ರೂಪಿಸಿದೆ. ಈ ಮಾನದಂಡಗಳು 1 ಜೂನ್ 2004 ಇಂದ ಜಾರಿಗೆ ಬಂದಿರುತ್ತದೆ.

**1. ಅರ್ಥ ವಿವರಣೆ :**

ಅ. ಈ ಮಾನದಂಡಗಳನ್ನು ಸೌಹಾರ್ದ ಸಹಕಾರಿಗಳ ಆರ್ಥಿಕ ಸಬಲತೆಯ ಮಾನದಂಡಗಳು ಎಂದು ಕರೆಯಲಾಗುವುದು.

ಆ. ಕಾಯ್ದೆ ಎಂದರೆ, ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997.

ಇ. ಸಂಯುಕ್ತ ಸಹಕಾರಿ ಎಂದರೆ, ಕಾಯ್ದೆ ಕಲಂ 53 ರಡಿ ರಚಿತಗೊಂಡ ಸಂಯುಕ್ತ ಸಹಕಾರಿ

ಈ. ಪತ್ತಿನ ಸಹಕಾರಿ ಎಂದರೆ ಸದಸ್ಯರಿಂದ ಅಥವಾ ಇತರರಿಂದ ಠೇವಣಿ ಸ್ವೀಕರಿಸುವುದು ಮತ್ತು ಸಾಲ ನೀಡುವ ಚಟುವಟಿಕೆಯಲ್ಲಿ ತೊಡಗಿದ ಸಹಕಾರಿ.

***ಟಿಪ್ಪಣಿ:** ಯಾವುದೇ ವಿವಿಧೋದ್ದೇಶ ಸಹಕಾರಿಯು ಮೇಲ್ಕಾಣಿಸಿದ ಚಟುವಟಿಕೆಯಲ್ಲಿ ತೊಡಗಿದ್ದಲ್ಲಿ ಅದನ್ನು ಪತ್ತಿನ ಸಹಕಾರಿ ಎಂದೇ ಪರಿಗಣಿಸಲಾಗುವುದು.*

ಉ. ಸದಸ್ಯರುಗಳೆಲ್ಲರೂ ನಿರ್ದಿಷ್ಟ ಮೊತ್ತದ ಹಣವನ್ನು ನಿಯಮಿತವಾಗಿ ಕಡ್ಡಾಯ ಉಳಿತಾಯ ಮಾಡಿ ಅಗತ್ಯವಿದ್ದ ಸದಸ್ಯರಿಗೆ ಸಾಲವಾಗಿ ನೀಡುವ ಚಟುವಟಿಕೆಯಲ್ಲಿ ತೊಡಗಿದ ಸಹಕಾರಿಗಳನ್ನು ಈ ಮಾನದಂಡಗಳನ್ನು ಜಾರಿಗೊಳಿಸಲು ಸ್ವಸಹಾಯ ಸಹಕಾರಿಗಳು ಎಂದು ಪರಿಗಣಿಸಲಾಗುವುದು.

2. ಯಾವುದೇ ಪತ್ತಿನ ಸಹಕಾರಿಯು ತನ್ನ ಚಟುವಟಿಕೆಯನ್ನು ಆರಂಭಿಸಿ ಎರಡನೆಯ ಸಹಕಾರಿ ವರ್ಷದ ಕೊನೆಗೆ ಲಾಭವನ್ನು ಗಳಿಸಲು ಆರಂಭಿಸಬೇಕು ಮತ್ತು ಈ ಕೆಳಗಿನ ಗುರಿಗಳನ್ನು ತಲುಪತಕ್ಕದ್ದು.

| ಅ.ಸಂ. | ಕಾರ್ಯಾಚರಣಾ ಪ್ರದೇಶದ ಜನಸಂಖ್ಯೆ | ಸದಸ್ಯರ ಸಂಖ್ಯೆ | ದುಡಿಯುವ ಬಂಡವಾಳ ರೂ. ಲಕ್ಷಗಳಲ್ಲಿ |
|---|---|---|---|
| 1 | 2 ಕ್ಕಿಂತ ಕಡಿಮೆ | 100 | 2 |
| 2 | 2 ರಿಂದ 5ರವರೆಗೆ | 200 | 4 |
| 3. | 5 ರಿಂದ 10ರವರೆಗೆ | 300 | 6 |
| 4. | 10 ರಿಂದ 20ರವರೆಗೆ | 400 | 8 |
| 5. | 20 ರಿಂದ 40ರವರೆಗೆ | 500 | 10 |
| 6. | 40 ರಿಂದ ಮೇಲ್ಪಟ್ಟು | 800 | 15 |

ಅ) ಯಾವುದೇ ಸ್ವಸಹಾಯ ಸಹಕಾರಿಯು ಚಟುವಟಿಕೆ ಆರಂಭಿಸಿ ಎರಡನೆಯ ಸಹಕಾರಿ ವರ್ಷಾಂತ್ಯಕ್ಕೆ ಕನಿಷ್ಠ 50 ಸದಸ್ಯರು ಹಾಗೂ ರೂ. 50,000/– ದುಡಿಯುವ ಬಂಡವಾಳವನ್ನು ಹೊಂದಿರತಕ್ಕದ್ದು.

3. ಮಾನದಂಡ 2ರಲ್ಲಿನ ಗುರಿಗಳನ್ನು ತಲುಪದ ಸಹಕಾರಿಯನ್ನು ದುರ್ಬಲ ಸಹಕಾರಿ ಎಂದು ಗುರುತಿಸಲಾಗುವುದು.

4. ಕರ್ನಾಟಕ ಸಹಕಾರ ಸಂಘಗಳ ಕಾಯ್ದೆ 1959ರಲ್ಲಿ ಚಟುವಟಿಕೆಯನ್ನು ನಡೆಸಿ ಕರ್ನಾಟಕ ಸೌಹಾರ್ದ ಸಹಕಾರಿ ಕಾಯ್ದೆ 1997ರಡಿ ಪರಿವರ್ತಿತಗೊಂಡ ಯಾವುದೇ ಸಹಕಾರಿಯು ಸತತ ಎರಡು ವರ್ಷ ನಷ್ಟವನ್ನು ಅನುಭವಿಸಿದರೆ ಅಥವಾ ಪರಿವರ್ತನೆಯಾಗಿ ಎರಡು ವರ್ಷಗಳಲ್ಲಿಯೂ ಮಾನದಂಡ 2 ರಲ್ಲಿನ ಗುರಿ ತಲುಪದಿದ್ದರೆ, ಅಂತಹ ಸಹಕಾರಿಯನ್ನು ದುರ್ಬಲ ಸಹಕಾರಿ ಎಂದು ಗುರುತಿಸಲಾಗುವುದು.

5. ದುರ್ಬಲ ಸಹಕಾರಿಗಳು ಒಂದು ವರ್ಷ ಸಂಯುಕ್ತ ಸಹಕಾರಿಯ ನೇರವಾದ ಪರಿವೀಕ್ಷಣೆಗೆ ಒಳಪಡುತ್ತದೆ. ಇಂತಹ ಸಹಕಾರಿಗಳು ದುರ್ಬಲತೆಯಿಂದ ಹೊರ ಬರಲು ಕಾರ್ಯ ಯೋಜನೆಯೊಂದನ್ನು ಸಿದ್ಧಪಡಿಸಿ, ಸಂಯುಕ್ತ ಸಹಕಾರಿಗೆ ಸಲ್ಲಿಸತಕ್ಕದ್ದು. ಇಂತಹ ಕಾರ್ಯ ಯೋಜನೆಯ ಅನುಷ್ಠಾನ ಮತ್ತು ಪ್ರಗತಿಯನ್ನು ಪ್ರತಿ ಮೂರು ತಿಂಗಳಿಗೊಮ್ಮೆ ಸಂಬಂಧಿಸಿದ ಸಹಕಾರಿಯು ಸಂಯುಕ್ತ ಸಹಕಾರಿಯ ಜೊತೆಗೆ ಪರಾಮರ್ಶಿಸಬೇಕು.

6. ದುರ್ಬಲತೆಯಿಂದ ಹೊರಬರುವ ಕಾರ್ಯ ಯೋಜನೆಯನ್ನು ಜಾರಿಗೆ ತಂದ ಮೇಲೂ ಸಹಕಾರಿಯು ಎರಡು ವರ್ಷಗಳಲ್ಲಿ ಮಾನದಂಡ 2 ರಲ್ಲಿ ಕಾಣಿಸಿದ ಗುರಿ ತಲುಪದಿದ್ದಲ್ಲಿ ಅಂತಹ ಸಹಕಾರಿಯ ಸಮಾಪನೆಗೆ ಸಂಯುಕ್ತ ಸಹಕಾರಿಯು ನಿಬಂಧಕರಿಗೆ ಶಿಫಾರಸ್ಸು ಮಾಡುತ್ತದೆ.

**ಪರಂತು,**

ಅ. ಕಾರ್ಯಯೋಜನೆಯೇ ಶೇ.70ನ್ನು ಸಾಧಿಸಿ, ಬೇರೆ ಕಾರಣಗಳಿಂದ ನಷ್ಟವಾಗಿದ್ದಲ್ಲಿ.

**ಅಥವಾ**

ಆ. ಪತ್ತಿನ ಸಹಕಾರಿಗಳು ಮತ್ತು ಸ್ವಸಹಾಯ ಸಹಕಾರಿಗಳು ಸದಸ್ಯರ ಸಂಖ್ಯೆಯನ್ನು ತಲುಪದೇ ದುಡಿಯುವ ಬಂಡವಾಳದ ಗುರಿ ತಲುಪಿದ್ದಲ್ಲಿ ಎರಡು ವರ್ಷದ ಅವಧಿಯನ್ನು ಇನ್ನು ಒಂದು ವರ್ಷ ವಿಸ್ತರಿಸಿ ನಂತರ ಅಂತಹ ಸಹಕಾರಿಯ ಸಮಾಪನೆಗೆ ಸೂಕ್ತ ಕ್ರಮ ಕೈಗೊಳ್ಳುವುದು.

ಈ ಸುತ್ತೋಲೆಯನ್ನು ನನ್ನ ಸಹಿ ಹಾಗೂ ಮೊಹರಿನೊಂದಿಗೆ ಇಂದು ಅಂದರೆ, 1 ಜೂನ್ 2004 ರಂದು ಹೊರಡಿಸಲಾಗಿದೆ.

ಸಹಿ /–

**(ಅನೂಪ ದೇಶಪಾಂಡೆ)**

ವ್ಯವಸ್ಥಾಪಕ ನಿರ್ದೇಶಕ